ಮನೆಕಟ್ಟಲು ೧೫ ಜನ ಐಎಎಸ್ ಅಧಿಕಾರಿಗಳಿಗೆ ಮುಂಗಡ ಹಣ ಒದಗಿಸಲಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಅಧಿಕಾರಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಧಿಕಾರಿಗಳು ಯಾರೂ ಇರುವುದಿಲ್ಲ.

ಮಹಾಜನ್ ವರದಿಯ ಬಗ್ಗೆ

೮೮೫. ಶ್ರೀ ಜಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ನೇ ಸಾಲಿನಲ್ಲಿ ಆಬ್ಕಾರಿ ಇಲಾಖೆಯಿಂದ ಸರ್ಕಾರಕ್ಕೆ ಬಂದ ಹಣವೆಷ್ಟು ?

ಆ) ರಾಜ್ಯದಲ್ಲಿ ತೆರಿಗೆ ರಹಿತ ಅಬಕಾರಿ ವ್ಯಾಪಾರ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಇಂತಹ ಪ್ರಕರಣಗಳು ೧೯೮೬-೮೭ನೇ ಸಾಲಿನಲ್ಲಿ ಎಷ್ಟು ಬೆಳಕಿಗೆ ಬಂದಿದೆ ?

ಈ) ಇದನ್ನು ತಪ್ಪಿಸಲು ಸರ್ಕಾರದವರು ಏನಾದರು ಕ್ರಮ ಕೈಗೊಂಡಿದ್ದಾರೆಯೆ ?

ಶ್ರೀ ಡಿ. ಬಿ. ಇನಾಂದಾರ್ (ಮಾನ್ಯ ಅಬಕಾರಿ ಸಚಿವರು).—

ಅ) ೨೦೪.೮೧ ಕೋಟಿ ರೂಪಾಯಿಗಳು.

ಆ) ಹೌದು.

ಇ) ೧೯೮೬-೮೭ನೇ ಸಾಲಿನಲ್ಲಿ ಕೇಂದ್ರೀಯ ವಿಚಕ್ಷಣ ದಳದವರು ಹದಿನಾಲ್ಕು ಪ್ರಕರಣಗಳನ್ನು ಪತ್ತೆ ಹಚ್ಚಿರುವರು.

ಈ) ಭಟ್ಟಿ ಕಾರ್ಖಾನೆಗಳು ತಯಾರಿಸುವ ಮದ್ಯದ ಸರಿಯಾದ ಲೆಕ್ಕ ಪತ್ರವಿರುವುದು ಮುದ್ರೆ ಸಾರದ ಸರಿಯಾದ ಬಳಕೆಗೆ ಮೇಲಿಂದ ಮೇಲೆ ತಪಾಸಣೆ ಮತ್ತು ದಂಡ ವಿಧಿಸುವಿಕೆ ಮುಂತಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಮಹಾಜನ್ ವರದಿಯ ಬಗ್ಗೆ

೯೧೯. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಗಡಿವಿವಾದ ನಿವಾರಣೆಗಾಗಿ ಯಾವ ಕ್ರಮಕ್ಕೆಗೊಳ್ಳಲಾಗಿದೆ.

ಆ) ಮಹಾಜನ್ ವರದಿಯನ್ನು ಜಾರಿಗೆ ತರಲು ಸರ್ಕಾರದವರು ಮಾಡಿದ ಪ್ರಯತ್ನವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಮತ್ತು ಆ) ಕರ್ನಾಟಕ ಸರ್ಕಾರವು ಮಹಾಜನ ವರದಿಯನ್ನು ಅನುಷ್ಠಾನಕ್ಕೆ ತರುವಂತೆ ಭಾರತ ಸರಕಾರವನ್ನು ಒತ್ತಾಯಿಸುತ್ತಿದೆ. ಈ ವಿಷಯದಲ್ಲಿ ದಿನಾಂಕ ೨೦-೮-೮೫, ೧೧-೯-೪೫ ಮತ್ತು ೯-೧೦-೮೫ರಂದು ಮೂರು ಪತ್ರಗಳನ್ನು ಪ್ರಧಾನ ಮಂತ್ರಿಯವರಿಗೆ ಬರೆಯಲಾಗಿದ್ದು ಮಹಾಜನ ವರದಿಯು ಅಂತಿಮವೆಂದು. ಇದರಲ್ಲಿ ಸಂಧಾನಕ್ಕೆ ಅವಕಾಶವಿಲ್ಲವೆಂದೂ, ಮತ್ತು ಇದನ್ನು ಅನುಷ್ಠಾನಕ್ಕೆ ತರದಿದ್ದರೆ ಕರ್ನಾಟಕಕ್ಕೆ ತೀವ್ರ ಅನ್ಯಾಯವಾಗುವುದೆಂದೂ ಮನವರಿಕೆ ಮಾಡಿಕೊಡಲಾಗಿದೆ. ಗಡಿ ವಿವಾದದಲ್ಲಿ ನ್ಯಾಯವನ್ನು ದೊರಕಿಸಲು ಸರ್ಕಾರವು ಎಲ್ಲ ಪ್ರಯತ್ನವನ್ನು ಮಾಡುತ್ತಿದೆ.